# ‘ವಿಜ್ಞಾನ, ತಂತ್ರಜ್ಞಾನ ಕೊಡುಗೆ ಅನನ್ಯ’

ವಿಕ ಚಿತ್ರ

■ ವಿಕ ಸುದ್ದಿಲೋಕ, ಕೊಪ್ಪಳ

ಮನುಕುಲಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಅಪಾರವಾಗಿದ್ದು, ವಿಜ್ಞಾನವಿಲ್ಲದೇ ಮಾನವ ಬದುಕಲು ಸಾಧ್ಯವಿಲ್ಲ, ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಎಸ್.ವಿ.ಸಂಕನೂರು ಹೇಳಿದರು.

ನಗರದ ಶ್ರೀಗವಿಸಿದ್ದೇಶ್ವರ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕರಾವಿಪ ಜಿಲ್ಲಾ ಸಮಿತಿ ಆಶ್ರಯದಲ್ಲಿ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯ ಸಮಾರೋಪ ಹಾಗೂ ಬಹುಮಾನ ವಿತರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದರು.



ಕೊಪ್ಪಳದ ಶ್ರೀಗವಿಸಿದ್ದೇಶ್ವರ ಮಹಾವಿದ್ಯಾಲಯದಲ್ಲಿ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು ಶನಿವಾರ ಬಹುಮಾನ ಪಡೆದರು.



ಕೊಪ್ಪಳದ ಶ್ರೀಗವಿಸಿದ್ದೇಶ್ವರ ಮಹಾವಿದ್ಯಾಲಯದಲ್ಲಿ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯ ಸಮಾರೋಪ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಎಂಎಲ್ಸಿ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಎಸ್.ವಿ.ಸಂಕನೂರು ಅವರು ಶನಿವಾರ ಮಾತನಾಡಿದರು.

ವಿದ್ಯಾರ್ಥಿಗಳು ವೈಜ್ಞಾನಿಕ ಚಿಂತನೆ, ವೈಜ್ಞಾನಿಕ ಕೆಲಸ, ವೈಜ್ಞಾನಿಕ ಬದುಕು ನಡೆಸಿದಾಗ ಮೂಢನಂಬಿಕೆಗಳು ತನ್ನಷ್ಟಕ್ಕೆ ತಾನೇ ದೂರ ಸರಿಯುತ್ತವೆ. ಯುವ ವಿಜ್ಞಾನಿಗಳು ಜನರಲ್ಲಿ ಜಾಗೃತಿ ಮೂಡಿಸಬೇಕು. ಹೊಸ ಅವಿಷ್ಕಾರಗಳನ್ನು ಮಾಡಬೇಕು. ತಂತ್ರಜ್ಞಾನ ಹಾಗೂ ವಿಜ್ಞಾನ ಸಾಕಷ್ಟು ಬೆಳೆದಿದ್ದು, ಯುವ ವಿಜ್ಞಾನಿಗಳು ಬಳಕೆ ಮಾಡಿಕೊಳ್ಳಬೇಕು ಎಂದರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಗೌರವ ಕಾರ್ಯದರ್ಶಿ ಗಿರೀಶ ಕಡ್ಲೇವಾಡ, ಕಾರ್ಯಕಾರಿ ಸಮಿತಿ ಸದಸ್ಯ ಜಗನ್ನಾಥ ಹಲ್ಲಡಗಿ, ವಿಜ್ಞಾನಿ ಡಿ.ಎಸ್.ಶಂಕರ್ ರಾವ್, ಕೃಷಿ ವಿಸ್ತರಣಾ ಕೇಂದ್ರ ಮುಂಡಾಳು ಡಾ.ಎಂ.ಬಿ. ಪಾಟೀಲ್, ಪ್ರಾಚಾರ್ಯ ಪ್ರೊ.ಎಂ.ಎಸ್. ದಾದ್ಮಿ, ಸಂಯೋಜಕ ಡಾ.ಕುಂಟೆಪ್ಪ ಗೌರಿಪುರ, ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್ ಇದ್ದರು.

ರಾಜ್ಯದ ಆರು ವಿಭಾಗಗಳಿಂದ ಮನುಕುಲಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಅವಿಷ್ಕಾರಗಳು ಎಂಬ ವಿಷಯದ ಮೇಲೆ 28 ವಿಜ್ಞಾನ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಕೆ.ಕಾವ್ಯ ಹಾಗೂ ಟಿ.ಚೈತ್ರ (ಮೊದಲ ಸ್ಥಾನ) ಪಡೆದು ಬಹುಮಾನ ಮತ್ತು 10 ಸಾವಿರ ರೂ. ಪಡೆದರು. ಸಿಂಧನೂರು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಮಂಜುನಾಥ ಹಾಗೂ ಮಂಜುನಾಥ (2ನೇ ಸ್ಥಾನ) ಬಹುಮಾನ ಮತ್ತು 7 ಸಾವಿರ ರೂ. ಪಡೆದರು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಜೆ.ಶಿಲ್ಪ ಹಾಗೂ ಸೌಜನ್ಯ (3ನೇ ಸ್ಥಾನ) ಬಹುಮಾನ ಮತ್ತು 5 ಸಾವಿರ ರೂ. ಪಡೆದರು. ಹೊಸಬಾವಿಯ ಎಂಎಸ್ ಕಾಲೇಜಿನ ಕಾವ್ಯ ಮರಿಗೌಡರ್ ಹಾಗೂ ಯು.ಎ. ಸಂಗೀತ, ಮಂಡ್ಯ ಪಿಇಎಸ್ ಕಾಲೇಜಿನ ಜ್ಯೋತಿ ಹಾಗೂ ಪಯೋನಿಧಿ ಅವರು ಸಮಾಧಾನಕರ ಬಹುಮಾನದ ಜತೆಗೆ ತಲಾ ಮೂರು ಸಾವಿರ ರೂ. ಪಡೆದರು. ಸ್ಪರ್ಧೆಯ ಅಂದಾಜು 90 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಉಪನ್ಯಾಸಕ ಡಾ.ನಾಗರಾ... ದಂಡೋತಿ ಅವರು ನಿರ್ವಹಿಸಿದರು.